JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಪಂಪಭಾರತದ ಸಂಪೂರ್ಣ ವಿಶ್ಲೇಷಣೆ

**ಮಂಜಪ್ಪ ಚಲವಾದಿ**

**ಪ್ರವೇಶ**

ಪಂಪ ಕನ್ನಡದ ಆದಿಕವಿ. ಅವನ ಲೌಕಿಕ ಕೃತಿ 'ವಿಕ್ರಮಾರ್ಜುನ ವಿಜಯ' (ಪಂಪಭಾರತ). ತನ್ನ ಈ ಕಾವ್ಯಕ್ಕೆ ಆಕರ ಯಾವುದೆಂಬುದನ್ನು ಕವಿಯೆ ಸೂಚಿಸಿದ್ದಾನೆ: "ವ್ಯಾಸಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆನ್." ಆದ್ದರಿಂದ ಸಂಸ್ಕೃತ ವ್ಯಾಸಭಾರತವೇ ಪಂಪನಿಗೆ ಮೂಲವೆಂಬುದರಲ್ಲಿ ಸಂಶಯವಿಲ್ಲ.

ಸಂಸ್ಕೃತದಲ್ಲಿದ್ದ ಭಾರತ ಸಂಬಂಧವಾದ ಕಾವ್ಯ, ನಾಟಕಗಳು ಮತ್ತು ಜೈನ ಭಾರತಕಥೆ ಕೂಡ ಅವನ ಮನಸ್ಸಿನಲ್ಲಿದ್ದಿರಬೇಕು.[1] ಅಷ್ಟೆ ಅಲ್ಲ, ಅವನ ಕಾಲದ ಜನತೆಯಲ್ಲಿ ಪ್ರಚಲಿತವಾಗಿದ್ದ ಕತೆಗಳೂ ಅವನ ಕೃತಿಯ ಮೇಲೆ ಪ್ರಭಾವ ಬೀರಿದ್ದಿರಬಹುದು. ವ್ಯಾಸಭಾರತದ ಕಥೆಯಲ್ಲಿ ಪಂಪ ಮಾಡಿಕೊಂಡಿರುವ ಮಾರ್ಪಾಟುಗಳೆಲ್ಲ ಅವನವೇ ಆಗಿರದೆ, ವ್ಯಾಸೇತರವಾದ ಈ ನಾನಾ ಮೂಲಗಳಿಂದ ಬಂದವಾಗಿರುವುದು ಸಾಧ್ಯ; ಈ ಮೂಲಗಳಲ್ಲಿ ಕೆಲವು ನಮ್ಮವರೆಗೆ ಉಳಿದು ಬಂದಿರಲಿಕ್ಕಿಲ್ಲ.

ತನ್ನ ಕಾಲದಲ್ಲಿ ಪ್ರಚುರವಾಗಿದ್ದ ಸಂಸ್ಕೃತ ಮಹಾಭಾರತದ ದಾಕ್ಷಿಣಾತ್ಯ ಪಾಠಸಂಪ್ರದಾಯವನ್ನು ಪಂಪ ಕಣ್ಣ ಮುಂದಿಟ್ಟುಕೊಂಡಿದ್ದನೆಂಬುದರಲ್ಲಿ ಅನುಮಾನವಿಲ್ಲ. ಆ ಪಾಠದ ಸ್ವರೂಪ ಹೇಗಿತ್ತೆಂಬುದನ್ನು ನಾವಿಂದು ಖಚಿತವಾಗಿ ಹೇಳುವುದು ಅಶಕ್ಯವಾದರೂ, ಇಷ್ಟಂತೂ ನಿಜ : ಪಂಪನಿಗೆ ಉಪಲಬ್ಧವಾಗಿದ್ದ ಮಹಾಭಾರತ ಪಾಠ ಈಗಿರುವಷ್ಟು ವಿಸ್ತಾರವಾಗಿರಲಿಲ್ಲ; ಅದರ ಎಷ್ಟೋ ಭಾಗಗಳು ಆಮೇಲೆ ಸೇರಿಕೊಂಡವು. ಆದ್ದರಿಂದ ವ್ಯಾಸಭಾರತದಲ್ಲಿರುವ ಎಷ್ಟೋ ಅಂಶಗಳು ಪಂಪಭಾರತದಲ್ಲಿಲ್ಲ ಎನ್ನುವಾಗ, ನಾವು ಮಹಾಭಾರತದ ಬೆಳವಣಿಗೆಯ ಪ್ರಶ್ನೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು.[2]

ವ್ಯಾಸಕೃತವೆನ್ನಲಾದ ಸಂಸ್ಕೃತ ಮಹಾಭಾರತವೊಂದು ವಿಶ್ವಕೋಶ ಸದೃಶವಾದ ಕೃತಿ; ಬೃಹತ್ತು, ಮಹತ್ತು ಎರಡರಲ್ಲೂ ಅಪ್ರತಿಮವಾದದ್ದು. ಅದರದು ಸಂಕೀರ್ಣ ಸ್ವರೂಪ: ಅದು ಕಾವ್ಯ, ಪುರಾಣ, ಇತಿಹಾಸ, ಧರ್ಮಗ್ರಂಥ ಇತ್ಯಾದಿ ಎಲ್ಲವೂ ಅಹುದು. ಒಟ್ಟಿನಲ್ಲಿ ಅದೊಂದು ಗೊಂಡಾರಣ್ಯ. ಅದನ್ನೊಂದು ಉದ್ಯಾನವನ್ನಾಗಿ ಪರಿವರ್ತಿಸಬೇಕೆಂಬುದು ಪಂಪಕವಿಯ ಸಂಕಲ್ಪ; ಅದರ ಫಲವೇ 'ವಿಕ್ರಮಾರ್ಜುನವಿಜಯ'. (''Pampa converts the jungle of tha Mahabharata into a park'' ಎಂಬುದು ಡಿ.ಎಲ್ .ನರಸಿಂಹಾಚಾರ್ ಅವರ ಉಕ್ತಿ.)

**ಕಾವ್ಯದ ಉದ್ದೇಶ**

ಪಂಪ ತನ್ನ ಕಾವ್ಯದ ಉದ್ದೇಶವನ್ನು ಪಂಪ ಸ್ವತಃ ಹೀಗೆ ಹೇಳಿಕೊಂಡಿದ್ದಾನೆ:

**ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ**

**ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ**

**ಕತೆಯೊಳೊಡಂಬಡಂಪಡೆಯೆ ಪೇಡೆ ಪಂಪನೆ ಪೇೞ್ಗುಮೆಂದು ಪಂ**

**ಡಿತರೆ ತಗುಳ್ದು ಬಿಚ್ಚಟಿಸೆ ಪೇಳಲೊಡರ್ಚಿದೆನೀ ಪ್ರಬಂಧಮಂ** (1.11)

'ಸಮಸ್ತ' ಎಂಬ ಮಾತಿಗೆ ಎರಡರ್ಥಗಳುಂಟು: ಸಂಪೂರ್ಣ, ಮತ್ತು ಸಂಗ್ರಹಿಸಿದ್ದು; ಎರಡರ್ಥಗಳೂ ಇಲ್ಲಿ ಸಂಗತ. ('ಸಮಾಸ' ಎಂದರೆ ಸಂಗ್ರಹ, 'ವ್ಯಾಸ' ಎಂದರೆ ವಿಸ್ತಾರ). ಮಹಾಭಾರತದ ಕತೆ ದೊಡ್ಡದು, ಅದನ್ನು ಸಂಗ್ರಹಿಸಿ ಹೇಳಬೇಕು, ಹಾಗೆ ಮಾಡುವಾಗ ಕತೆಯ ಶರೀರ ಕೆಡಬಾರದು, ಯಾವ ಅವಯವವೂ ಲೋಪಗೊಳ್ಳಬಾರದು, ಅರ್ಥಾತ್, ಕತೆ ಸಂಗ್ರಹವಾಗಿಯೂ ಸಂಪೂರ್ಣವಾಗಿರಬೇಕು. ಇದು ಪಂಪನ ಆಶಯ. ಇಂತಹ 'ಸಮಸ್ತ' ಭಾರತ ಪಂಪನಿಗಿಂತ ಹಿಂದೆ ಕನ್ನಡದಲ್ಲಿ ಬಹುಶಃ ಇರಲಿಲ್ಲ. (ಸಂಸ್ಕೃತದಲ್ಲೂ ವಿರಳ). ಮೊದಲಬಾರಿಗೆ ಪಂಪ ಅದನ್ನು ಕೊಟ್ಟ. ಕತೆ ಮುಕ್ಕಾಗದಂತೆ ಮೂಲವನ್ನು ಸಂಕ್ಷೇಪಿಸಿ ನಿರೂಪಿಸಿದ್ದು ಪಂಪನ ಭಾರತದ 'ಅಪೂರ್ವತೆ' (ಅಥವಾ ಮೊದಲನೆಯ ಅಪೂರ್ವತೆ) ಎಂದು ಭಾವಿಸಬಹುದು.

ಮೂಲಭಾರತವನ್ನು ಕಿರಿದುಗೊಳಿಸುವಲ್ಲಿ ಪಂಪನ ದೃಷ್ಟಿ, ಧೋರಣೆಗಳೇನು? ಇಲ್ಲಿಯೂ ಅವನ ಒಂದೆರಡು ಸೂಚನೆಗಳನ್ನು ಗಮನಿಸಬೇಕು. ಹಿಂದೆ ಉದ್ಧರಿಸಿದ ಪದ್ಯದಲ್ಲಿ ಬಂದಿರುವ "ವರ್ಣಕಂ ಕತೆಯೊಳೊಡಂಬಡಂ ಪಡೆಯೆ" ಎಂಬ ಹೇಳಿಕೆಯ ಜೊತೆಗೆ, "ಬೆಳಗುವೆನಿಲ್ಲಿ ಲೌಕಿಕಮನ್ " (14.60) ಎಂಬ ಉಕ್ತಿಯನ್ನೂ ನಾವು ಪರಿಭಾವಿಸುವುದು ಉಪಯುಕ್ತ. ಹೀಗೆ ಮಾಡಿದಾಗ ನಮಗೆ ಹೊಳೆಯುವ ಮುಖ್ಯ ಸಂಗತಿಯೆಂದರೆ, ಪಂಪನ ದೃಷ್ಟಿ ಲೌಕಿಕ ಮತ್ತು ಕಲಾನಿಷ್ಠ ಎಂಬುದು. ಇದು, ಪಂಪ ಭಾರತವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಕೀಲಿಕೈಯನ್ನೊದಗಿಸುತ್ತದೆ.

ವ್ಯಾಸಮಹಾಭಾರತವೊಂದು ಕಾವ್ಯವೇನೋ ಹೌದು. ಆದರೆ ಕಾವ್ಯೇತರವಾದ ವಿಷಯಗಳೂ ಅದರಲ್ಲಿ ಸಮೃದ್ಧವಾಗಿ ತುಂಬಿಕೊಂಡು, ಅದರ ಕಾವ್ಯತ್ವವನ್ನು ಹಿಂದಕ್ಕೆ ಸರಿಸಿವೆ; ಜನಮನದಲ್ಲಿ ಅದು ಕೇವಲ 'ಪಂಚಮವೇದ'ವಾಗಿ ಪುರಸ್ಕಾರಗೊಳ್ಳುವಂತೆ ಮಾಡಿವೆ. ಅದರಲ್ಲಿ ಇಡಿಕಿರಿದಿರುವ ಧಾರ್ಮಿಕ, ತಾತ್ವಿಕ, ನೈತಿಕ ಸಾಮಗ್ರಿಯನ್ನು–ಕಾವ್ಯಕ್ಕೆ ಅನವಶ್ಯಕ, ಹೊರಗು ಎನಿಸುವಂಥದನ್ನು–ಕೈಬಿಟ್ಟು, ಮುಖ್ಯವಾಗಿ ಅದನ್ನೊಂದು ಮಾನವೀಯ ಸ್ವಾರಸ್ಯವುಳ್ಳ ಕಾವ್ಯವನ್ನಾಗಿ ಮಾಡಬೇಕೆಂಬುದು ಪಂಪನ ವಿವಕ್ಷೆ. ಅತಿಮಾನುಷ ಎನಿಸುವ ಸಂಗತಿಗಳೂ ಅವನಿಗೆ ಬಹುಪಾಲು ವರ್ಜನೀಯ. ಅವನ ದೃಷ್ಟಿ ಪುರಾಣಿಕನದಲ್ಲ, ಕವಿಯದು. ಸಂಸ್ಕೃತ ಮಹಾಕಾವ್ಯಗಳ ಮಾರ್ಗದಲ್ಲಿ, ಅಷ್ಟಾದಶ ವರ್ಣನೆಗಳನ್ನಳವಡಿಸಿ ಕೃತಿ ರಚನೆ ಮಾಡುವುದೂ ಪಂಪನ ಯೋಜನೆ.

ಪಂಪ ಜೈನಮತೀಯನಾದುದು ಅವನ ಈ ಲೌಕಿಕ ದೃಷ್ಟಿಗೆ ಕಾರಣವೆಂಬುದು ಸಾಮಾನ್ಯ ತಿಳುವಳಿಕೆ. ಆದರೆ ಈ ದೃಷ್ಟಿಯನ್ನು ಪಂಪ ಕವಿಯಾಗಿ ಕಲಾವಿದನಾಗಿ ತಳೆದಿದ್ದಾನೆಯೇ ಹೊರತು ಜೈನಧರ್ಮೀಯನಾಗಿ ಅಲ್ಲ ಎಂದು ಹೇಳಬೇಕಾಗುತ್ತದೆ. ಅವನ ವ್ಯಕ್ತಿತ್ವದಲ್ಲಿ ವೈದಿಕ ಸಂಸ್ಕಾರವಿದೆಯೆಂಬ ಮೂಲಭೂತವಾದ ಅಂಶವನ್ನು ಮರೆಯಬಾರದು. ಅವನ ದೃಷ್ಟಿ ಸಂಪೂರ್ಣ ಜೈನಮತಾವಿಷ್ಟವಾಗಿದ್ದ ಪಕ್ಷದಲ್ಲಿ ಅವನೊಂದು ಜೈನ ಮಹಾಭಾರತವನ್ನು ಬರೆಯುತ್ತಿದ್ದ; ವೈದಿಕ ಭಾರತವನ್ನಲ್ಲ. ಈಗಿರುವಂತೆ ಪಂಪಭಾರತ ವೈದಿಕ ಭಾರತವೇ.[3]

ವ್ಯಾಸಭಾರತ 'ನಾರಾಯಣಕಥೆ' ಎನಿಸುವಷ್ಟರಮಟ್ಟಿಗೆ ಅಲ್ಲಿ ಕೃಷ್ಣನಿಗೆ ಪ್ರಾಧಾನ್ಯ. ಪಂಪ ಅಷ್ಟು ಪ್ರಾಶಸ್ತ್ಯವನ್ನು ಕೃಷ್ಣನಿಗೆ ತನ್ನ ಕಾವ್ಯದಲ್ಲಿ ಕೊಟ್ಟಿಲ್ಲ, ನಿಜ. ಆದರೆ ಅವನಿಗೆ ಕೃಷ್ಣನ ಬಗ್ಗೆ, (ಶಿವನ ಬಗ್ಗೆ ಕೂಡ) ಗೌರವವಿದೆ ಎಂಬುದನ್ನು ಲಕ್ಷಿಸಬೇಕು. ಅವನ ಪಾಲಿಗೆ ಭಾರತ 'ಪಂಚಮವೇದ'ವಲ್ಲವಷ್ಟೆ. ಆದ್ದರಿಂದ ಕೃಷ್ಣ ಪಂಪನಲ್ಲಿ ಸೂತ್ರಧಾರಿಯಾಗಿ ಮೆರೆಯದೆ ಒಬ್ಬ ಪ್ರಮುಖ ಪಾತ್ರಧಾರಿಯಾಗಿ ಕಾಣಿಸಿಕೊಳ್ಳುತ್ತಾನೆ. ಪಂಪನ ಲೌಕಿಕ ದೃಷ್ಟಿಯಿಂದ ಅವನ ಕಲೆಗೆ ಲಾಭವಾಯಿತಾದರೂ, ಮೂಲಮಹಾಭಾರತದ ದರ್ಶನಕ್ಕೆ ಅವನ ಕಾವ್ಯ ಎರವಾಯಿತೆಂಬ ಮುಖ್ಯ ಸಂಗತಿಯನ್ನು ನಾವು ನೆನಪಿಡಬೇಕು. (ಕುಮಾರವ್ಯಾಸ ಆ ದರ್ಶನವನ್ನುಳಿಸಿಕೊಂಡನು).

**ಅರ್ಜುನನ ಕಥೆ**

ಮಹಾಭಾರತವನ್ನು ಪಂಪ 'ವಿಕ್ರಮಾರ್ಜುನ ವಿಜಯ'ವನ್ನಾಗಿ ಮಾರ್ಪಡಿಸಿದ್ದಾನೆ; ಎಂದರೆ ಇದು ಅರ್ಜುನನ ಕಥೆ; ಅರ್ಜುನನೇ ಇಲ್ಲಿ ನಾಯಕ.[4] ಪ್ರತಿಯೊಂದು ಆಶ್ವಾಸದ ಆದ್ಯಂತಗಳಲ್ಲೂ ಅರ್ಜುನನ ಸ್ತವನ ಬರುತ್ತದೆ. ಅರ್ಜುನನಿಗೆ ಪ್ರಾಶಸ್ತ್ಯವಿತ್ತಿರುವುದಲ್ಲದೆ ಅವನನ್ನೂ ತನ್ನ ಆಶ್ರಯದಾತನಾದ ಅರಿಕೇಸರಿಯನ್ನೂ ಸಮೀಕರಿಸಿದ್ದಾನೆ ಪಂಪ. ಅವನೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ: "ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್

"(1.14). ವೈಯಕ್ತಿಕ ಜೀವನ, ಸಾಧನೆಗಳಲ್ಲಿ ಅರ್ಜುನನಿಗೂ ಅರಿಕೇಸರಿಗೂ ಕೆಲವು ಸಾಮ್ಯಗಳಿದ್ದುವೆಂದು ತೋರುತ್ತದೆ; "…..ಸಂದರ್ಜುನ ನೊಳ್ ಪೋಲ್ವೀ ಕಥಾ ಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ" (1.51) ಎಂಬ ಹೇಳಿಕೆ ಗಮನಾರ್ಹ. ಒಟ್ಟಿನಲ್ಲಿ, ಮಹಾಭಾರತ ಕಥೆಯೊಡನೆ ತನ್ನ ಯುಗವನ್ನು ಬೆಸೆದಿದ್ದಾನೆ ಪಂಪ.[5] ಈ ಬೆಸುಗೆ ಬಹಳ ಕಡೆ ಸಹಜವಾಗಿ ಸೂಚ್ಯವಾಗಿ ಬಂದಿದ್ದರೆ, ಕೆಲವೆಡೆ ವಾಚ್ಯವಾಗಿ ಅನೌಚಿತ್ಯಕ್ಕೆ ಎಡೆಗೊಡುವಂತೆ ಬಂದಿದೆ.

ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡು ಅವನಿಗೆ ಅರಿಕೇಸರಿಯೊಡನೆ ಅಭೇದ ಕಲ್ಪಿಸಿದ್ದರಿಂದ, ದ್ರೌಪದಿಯನ್ನು ಅರ್ಜುನನೊಬ್ಬನಿಗೇ ಮಡದಿಯನ್ನಾಗಿಸುವ ಪರಿಸ್ಥಿತಿ ಪಂಪನಿಗೊದಗಿದೆ.[6] ಇದರಿಂದ ಅವನು ಇಕ್ಕಟ್ಟಿಗೂ ಸಿಕ್ಕುತ್ತಾನೆ; ಏಕೆಂದರೆ, ಕೀಚಕ ಪ್ರಸಂಗದಲ್ಲಿ ದ್ರೌಪದಿಯನ್ನು ಪಾರುಮಾಡುವವನು ಮತ್ತು ದ್ರೌಪದೀಪರಿಭವಕ್ಕಾಗಿ ದುಶ್ಶಾಸನ, ದುರ್ಯೋಧನರ ಮೇಲೆ ಸೇಡು ತೀರಿಸಿಕೊಳ್ಳುವವನು ಭೀಮ. ಅರ್ಜುನನಿಗೆ ಪಂಪ ಪ್ರಾಧಾನ್ಯ ಕೊಟ್ಟುದರಿಂದ ಸುಭದ್ರೆಗೂ ಪ್ರಧಾನ್ಯ ಕೊಡುವುದು ಅನಿವಾರ್ಯವಾಯಿತು : ಕಡೆಯಲ್ಲಿ ಅರ್ಜುನನೊಡನೆ ಪಟ್ಟಕ್ಕೇರುವವಳು ದ್ರೌಪದಿಯಲ್ಲ, ಸುಭದ್ರೆ. ಪಂಪ ತನ್ನ ರಾಜಭಕ್ತಿಗೆ ಹೀಗೆಲ್ಲ ಬೆಲೆ ತೆರಬೇಕಾಗುತ್ತದೆ. ಅರ್ಜುನನ ಎದುರಾಳಿಯಾದ ಕರ್ಣನಿಗೂ ಮಹತ್ವ ಕೊಟ್ಟು, ಭಾರತವನ್ನು 'ಕರ್ಣರಸಾಯನ' ಎಂದು ಘೋಷಿಸಿದ್ದೂ ಪಂಪನ ವೈಶಿಷ್ಟ್ಯಗಳಲ್ಲೊಂದು.[7]

**ಮಹಾಭಾರತದ ಪ್ರಮುಖ ಘಟನೆಗಳು**

ಮುಖ್ಯ ಕಥೆ ಹಾಗೂ ಪ್ರಮುಖ ಪಾತ್ರಗಳ ಮೇಲೆ ಪಂಪನಿಗೆ ಯಾವಾಗಲೂ ಕಣ್ಣು; ಯಾವೊಂದು ಮುಖ್ಯ ಘಟನೆಯನ್ನೂ ಅವನು ಬಿಟ್ಟಿಲ್ಲ. ಮುಖ್ಯ ಕಥಾಪ್ರವಾಹಕ್ಕೆ ಪೂರಕ, ಪೋಷಕವಾದುದನ್ನು ಅವನು ನಾಲ್ಕಾರು ಮಾತುಗಳಲ್ಲಿ ಉಳಿಸಿಕೊಳ್ಳುತ್ತಾನೆ; ಅನಗತ್ಯ, ಅಸಂಗತ ಎನಿಸಿದ್ದನ್ನು ಲೋಪಿಸುತ್ತಾನೆ. ಯಾವ ಯಾವುದಕ್ಕೆ ಎಷ್ಟೆಷ್ಟು ಸ್ಥಾನ ಕೊಡಬೇಕು ಎಂಬುದನ್ನು ಅವನು ಬಲ್ಲ. ಅವನ ಪ್ರಮಾಣ ಪ್ರಜ್ಞೆ ಒಟ್ಟಿನ ಮೇಲೆ ಮೆಚ್ಚಬೇಕಾದುದು. ಕವಿಯೆ ಒಂದೆಡೆ ಕೊಟ್ಟಿರುವ 'ವಿಷಯಾನುಕ್ರಮಣಿಕೆ'ಯನ್ನು ನೋಡಿದರೆ, ಅವನ ಕತೆಯ ಸಮಗ್ರತೆ ಮನವರಿಕೆಯಾಗುತ್ತದೆ : "ಆದಿ ವಂಶಾವತಾರ ಸಂಭವಂ ರಂಗಪ್ರವೇಶಂ ಜತುಗೃಹದಾಹಂ ಹಿಡಿಂಬ ವಧೆ ಬಕಾಸುರವಧೆ ದ್ರೌಪದೀ ಸ್ವಯಂವರಂ ವೈವಾಹಂ ಯುಧಿಷ್ಠಿರ ಪಟ್ಟಬಂಧನಂ ಇಂದ್ರಪ್ರಸ್ಥ ಪ್ರವೇಶಂ ಅರ್ಜುನ ದಿಗ್ವಿಜಯಂ ದ್ವಾರಾವತೀ ಪ್ರವೇಶಂ ಸುಭದ್ರಾಹರಣಂ ಸುಭದ್ರಾವಿವಾಹಂ ಖಾಂಡವವನ ದಹನಂ ಮಯ ದರ್ಶನಂ ನಾರದಾಗಮನಂ ಜರಾಸಂಧವಧೆ ರಾಜಸೂಯಂ ಶಿಶುಪಾಲವಧೆ ದ್ಯೂತ ವ್ಯತಿಕರಂ ವನಪ್ರವೇಶಂ ಕಿಮ್ಮೀರವಧೆ ಕಾಮ್ಯಕವನ ದರ್ಶನಂ ದ್ವೈತವನ ಪ್ರವೇಶಂ ಸೈಂಧವ ಬಂಧನಂ ಚಿತ್ರಾಂಗದ ಯುದ್ಧಂ ಕಿರಾತದೂತಾಗಮನಂ ದ್ರೌಪದೀ ವಾಕ್ಯಂ ಪಾರಾಶರವೀಕ್ಷಣಂ ಇಂದ್ರಕೀಲಾಭಿಗಮನಂ ಈಶ್ವರಾರ್ಜುನ ಯುದ್ಧಂ ದಿವ್ಯಾಸ್ತ್ರಲಾಭಂ ಇಂದ್ರಲೋಕಾಲೋಕನಂ ನಿವಾತಕವಚಾಸುರವಧೆ ಕಾಳಕೇಯ ಪೌಲೋಮ ವಧೆ ಸೌಗಂಧಿಕ ಕಮಲಾಹರಣಂ ಜಟಾಸುರ ವಧೆ ಮಾಯಾ ಮತ್ತ ಹಸ್ತಿ ವ್ಯಾಜಂ ವಿರಾಟಪುರಪ್ರವೇಶಂ ಕೀಚಕವಧೆ ದಕ್ಷಿಣೋತ್ತರ ಗೋಗ್ರಹಣಂ ಅಭಿಮನ್ಯುವಿವಾಹಂ ಮಂತ್ರಾಲೋಚನಂ ದೂತಕಾರ್ಯಂ ಕುರುಕ್ಷೇತ್ರ ಪ್ರಯಾಣಂ ಭೀಷ್ಮ ಕರ್ಣ ವಿವಾದಂ ಯುದ್ಧೋದ್ಯೋಗಂ ಶ್ವೇತವಧೆ ಭೀಷ್ಮಶರಶಯನಂ ದ್ರೋಣಾಭಿಷೇಕಂ ಅಭಿಮನ್ಯುವಧೆ ಸೈಂಧವವಧೆ ಘಟೋತ್ಕಚವಧೆ ದ್ರೋಣಚಾಪಮೋಕ್ಷಂ ದ್ರೋಣವಧೆ ಅಶ್ವತ್ಥಾಮ ಕರ್ಣವಿವಾದಂ ಕರ್ಣಾಭಿಷೇಕಂ ಸಂಸಪ್ತಕವಧೆ ದುಶ್ಶಾಸನವಧೆ ವೇಣೀಸಂಹನನಂ ಕರ್ಣಾರ್ಜುನಯುದ್ಧಂ ಕರ್ಣ ಸೂರ್ಯ ಲೋಕ ಪ್ರಾಪ್ತಿ ಶಲ್ಯಾಭಿಷೇಕಂ ಶಲ್ಯನಿಪಾತನಂ ಭೀಮ ದುರ್ಯೋಧನ ಗದಾಯುದ್ಧಂ ದುರ್ಯೋಧನವಧೆ ಪಂಚಪಾಂಡವಹರಣಂ ಸ್ತ್ರೀ ಪರ್ವ ಅರ್ಜುನಾಭಿಷೇಕಂ" (14.52ನೆಯ ಪದ್ಯದನಂತರ). ಇಷ್ಟಲ್ಲದೆ 'ಪೆಱವುಮುಪಾ ಖ್ಯಾನ ಕಥೆಗಳೊಳವೊಂದುಂ ಕುಂದಲೀಯದೆ ಪೇೞ್ದೆಂ" ಎನ್ನುತ್ತಾನೆ ಪಂಪ.

ಪಂಪಭಾರತದ ಆಶ್ವಾಸ ಯೋಜನೆ ಸಂಸ್ಕೃತ ಭಾರತದ ಪರ್ವಯೋಜನೆಗೆ ಸಂಪೂರ್ಣ ಸಂವಾದಿಯಾಗಿಲ್ಲವಾದರೂ, ಕಥೆಯ ಆನುಪೂರ್ವಿ ಮೂಲಾನುಸಾರಿಯಾಗಿಯೆ ಇದೆ. ಅದನ್ನು ಹೀಗೆ ತೋರಿಸಲಾಗಿದೆ.: "ಆದಿಪರ್ವ ಆಶ್ವಾಸ 1 ರಿಂದ 5; ಸಭಾಪರ್ವ ಆಶ್ವಾಸ 6, 7ರಲ್ಲಿ (ಪದ್ಯ 1–21); ಅರಣ್ಯಪರ್ವ ಆಶ್ವಾಸ 7 (ಉಳಿದುದು), 8ರಲ್ಲಿ (1–48); ವಿರಾಟಪರ್ವ ಆಶ್ವಾಸ 8 (ಉಳಿದುದು), 9ರಲ್ಲಿ (1–10); ಉದ್ಯೋಗಪರ್ವ ಆಶ್ವಾಸ 9 (ಉಳಿದುದು); ಭೀಷ್ಮಪರ್ವ, ಆಶ್ವಾಸ 10, 11ರಲ್ಲಿ (1–51); ದ್ರೋಣಪರ್ವ ಆಶ್ವಾಸ 11 (ಉಳಿದುದು), 12ರಲ್ಲಿ (1–33); ಕರ್ಣಪರ್ವ ಆಶ್ವಾಸ 12 (ಉಳಿದುದು), 13ರಲ್ಲಿ (1–28); ಶಲ್ಯ, ಗದಾಪರ್ವ ಆಶ್ವಾಸ 13 (29–48) 13 (49–94); ಸೌಪ್ತಿಕಪರ್ವ ಆಶ್ವಾಸ 13 (ಉಳಿದುದು) ಮತ್ತು ಸ್ತ್ರೀಪರ್ವ ಆಶ್ವಾಸ 14 (1–10)" [8]

**ಪಂಪ ಕವಿಯ ನಿರೂಪಣೆ**

ಪಂಪನ ಪಂಪಭಾರತದ ವಿಶ್ಲೇಷಣೆಯನ್ನು ಮಾಡುವಾಗ ಈ ಕೆಳಗಿನ ನಿರೂಪಣೆ ಸಹಕಾರಿಯಾಗಬಲ್ಲವು. ಏಕೆಂದರೆ ಸಮಸ್ತ ಭಾರತವನ್ನು ಗ್ರಹಿಸಿದಾಗ ದೊರಕುವ ಅಂಶಗಳನ್ನು ಕವಿಯ ನಿರೂಪಣೆಯೆಂದು ಇಲ್ಲಿ ಭಾವಿಸಿ ಹೀಗೆ ನಿರೂಪಿಸಲಾಗಿದೆ.

- ಪಂಪ ವಿಶೇಷವಾಗಿ ಮೂಲವನ್ನು ಸಂಗ್ರಹಿಸುವ ಕೆಲಸವನ್ನು ಮಾಡುತ್ತಾನಾದರೂ, ಕೆಲವೆಡೆ ವಿಸ್ತರಿಸುವ ಪ್ರವೃತ್ತಿಯನ್ನೂ ತೋರುತ್ತಾನೆ.[9] ಬಹಳ ಕಡೆ ಬದಲಿಸುವುದೂ ಉಂಟು. ಮೂಲದಲ್ಲಿಲ್ಲದ ಸಂಗತಿಗಳನ್ನು, ಕಥಾಂಶಗಳನ್ನು ವಿರಳವಾಗಿ ತರುವುದೂ ಉಂಟು. ಅಂತೂ ಪಂಪಭಾರತದಲ್ಲಿ ಲೋಪ, ಆಗಮ, ಆದೇಶ ಪ್ರಕ್ರಿಯೆಗಳು ಅಸಂಖ್ಯವಾಗಿ ನಡೆದಿವೆ.
- ಮೂಲಭಾರತದಲ್ಲಿ, ವೈಶಂಪಾಯನ ಜನಮೇಜಯನಿಗೆ ಹೇಳಿದಂತೆ ಕತೆ ಉಕ್ತವಾಗಿದೆ. ಪಂಪ ಭಾರತದಲ್ಲಿ ವೈಶಂಪಾಯನನ ಅಥವಾ ಉಗ್ರಶ್ರವನ ಮಧ್ಯಸ್ಥಿಕೆಯಿಲ್ಲ; ಪಂಪ ನೇರವಾಗಿ ಕತೆ ಹೇಳಿಕೊಂಡು ಹೋಗುತ್ತಾನೆ. ಮೂಲದ್ದು ಪುರಾಣದ ಧಾಟಿ; ಪಂಪನದು ಕವಿಯ ರೀತಿ.
- ಮೂಲದಲ್ಲಿರುವುದನ್ನು ಪಂಪ ಹೇಗೆ ಕೈ ಬಿಡುತ್ತಾನೆಂಬುದಕ್ಕೆ ಕೆಲವು ಮುಖ್ಯ ನಿದರ್ಶನಗಳನ್ನೀಗ ಸೂಚಿಸಬಹುದು. ವ್ಯಾಸಭಾರತದಲ್ಲಿ ಕಾವ್ಯೇತರ ವಿಷಯಗಳು ವಿಪುಲವಾಗಿಯಷ್ಟೆ; ಅದರಲ್ಲೂ ಮುನಿಗಳು ತುಂಬಿರುವ ಅರಣ್ಯ ಪರ್ವದಲ್ಲಿ ಇವುಗಳ ಪಾಲು ಅಧಿಕ. ಮುಖ್ಯ ಕಥೆಗೆ ಬಾಧಕವಾದ ಇಂಥ ಸಾಮಗ್ರಿಯನ್ನೆಲ್ಲ ಪಂಪ ನಿರ್ದಾಕ್ಷಿಣ್ಯವಾಗಿ ಕೊಚ್ಚಿ ಹಾಕಿದ್ದಾನೆ. "ಧರ್ಮ ದರ್ಶನ ಮತ ಸಂಪ್ರದಾಯ ನೀತಿ ಅಖ್ಯಾನ ಉಪಾಖ್ಯಾನಗಳು ಪಂಪನಿಗೆ ಅಪ್ರಕೃತ." ಹೀಗಾಗಿ, ನೂರು ಅಧ್ಯಾಯಗಳಿಂದ ಕೂಡಿದ ಆದಿಪರ್ವದ ಪೀಠಿಕಾ ಭಾಗವನ್ನು ಅವನು ಹಾರಿಸಿಬಿಟ್ಟಿದ್ದಾನೆ; ವಿದುರನೀತಿ, ಕಣಿಕನೀತಿ, ಸನತ್ಸುಜಾತನೀತಿ, ಯಯಾತಿಯ ಉಪಾಖ್ಯಾನ, ಶಕುಂತಲೋಪಾಖ್ಯಾನ, ಸಾವಿತ್ರಿಯ ಉಪಾಖ್ಯಾನ, ರಾಮೋಪಾಖ್ಯಾನ, ನಳೋಪಾಖ್ಯಾನ, ಹನುಮಂತನ ವಿರಾಡ್ರೂಪದರ್ಶನ ಇತ್ಯಾದಿಗಳೂ ಪಂಪಭಾರತದಲ್ಲಿ ಸ್ಥಾನ ಪಡೆದಿಲ್ಲ. ಏಕಲವ್ಯನ ಪ್ರಕರಣವೂ ಲೋಪಗೊಂಡಿದೆ. ಅರ್ಜುನನ ವ್ಯಕ್ತಿತ್ವಕ್ಕೆ ಕುಂದು ತರುವುದಾದ್ದರಿಂದ.
- ಅಕ್ಷಯ ವಸ್ತ್ರದ ಪ್ರಸಂಗವನ್ನೂ ಪಂಪ ಬಿಟ್ಟಿದ್ದಾನೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಇಲ್ಲಿ ಸ್ವಲ್ಪ ತೊಡಕುಂಟು. ದ್ರೌಪದಿಯ ವಸ್ತ್ರ ಕೃಷ್ಣಕೃಪೆಯಿಂದ ಅಕ್ಷಯವಾದ ಸಂಗತಿ ಪಂಪನ ಕಾಲಕ್ಕೆ ಮೂಲಭಾರತದಲ್ಲಿರಲಿಲ್ಲ. ಅದು ಆ ಮೇಲಿನ ಪ್ರಕ್ಷೇಪ ಎಂದು ವಿದ್ವಾಂಸರ ನಿರ್ಣಯ. (ಕುಮಾರವ್ಯಾಸನ ಕಾಲಕ್ಕೆ ಅದು ಮಹಾಭಾರತಾಂತರ್ಗತವಾಗಿತ್ತು.)[10] ಮೂಲಪಾಠದ ಪ್ರಕಾರ, ದುಶ್ಯಾಸನ ದ್ರೌಪದಿಯ ವಸ್ತ್ರವನ್ನು ಸೆಳೆಯತೊಡಗಿದಾಗ ಒಂದಾದ ಮೇಲೊಂದರಂತೆ ವಸ್ತ್ರಗಳು ಕಾಣಿಸಿಕೊಳ್ಳುತ್ತವೆ. (ಅದಕ್ಕೂ ಕೃಷ್ಣನಿಗೂ ಸಂಬಂಧವಿಲ್ಲ). ಪಂಪಭಾರತದಲ್ಲಿ, ದುಶ್ಯಾಸನ ದ್ರೌಪದಿಯ ಸೀರೆಗೆ ಕೈ ಹಾಕುತ್ತಾನಷ್ಟೆ; ಸೆಳೆಯುವುದಿಲ್ಲ. ಇದರಿಂದ ಪಂಪ ಎರಡು ಪ್ರಯೋಜನಗಳನ್ನು ಸಾಧಿಸಬಯಸಿದ್ದಾನೆ : ಅಪಮಾನದಿಂದ ದ್ರೌಪದಿಯನ್ನು ಪಾರುಮಾಡುವುದು (ಅರಿಕೇಸರಿಯ ದೃಷ್ಟಿಯಿಂದ ಇದು ಅತ್ಯಗತ್ಯ) ಮತ್ತು ವಸ್ತ್ರಗಳು ಒಂದಾದ ಮೇಲೊಂದರಂತೆ ಕಾಣಿಸಿಕೊಳ್ಳುವ ಅದ್ಭುತವನ್ನು ನಿವಾರಿಸುವುದು. ಆದರೆ ದ್ರೌಪದಿಯನ್ನು ಪಾರುಮಾಡಿದ ಪಂಪ ಸ್ವತಃ ತೊಡಕಿಗೆ ಗುರಿಯಾಗಿದ್ದಾನೆ. (ವಸ್ತ್ರದ ಮಾತನ್ನೇ ಅವನು ಎತ್ತದಿರಬಹುದಿತ್ತು.)
- ಪಂಪ ಕೆಲವೊಮ್ಮೆ ವಿಷಯಗಳನ್ನು ಸ್ಥಳಾಂತರಿಸುವುದುಂಟು. ಉದಾಹರಣೆಗೆ ಅಂಬೋಪಾಖ್ಯಾನ. ಇದು ಮೂಲದಲ್ಲಿ ಉದ್ಯೋಗಪರ್ವದ ಅಂತ್ಯದಲ್ಲಿ ಬರುತ್ತದೆ. ಅದನ್ನು ಪಂಪ ಆದಿಪರ್ವಕ್ಕೆ–ಭೀಷ್ಮ ಪ್ರತಿಜ್ಞೆಯ ಸಂದರ್ಭಕ್ಕೆ–ವರ್ಗಾಯಿಸಿದ್ದಾನೆ. ಮೂಲದಲ್ಲಿ, ದ್ರುಪದನ ಗರ್ವಭಂಗ ಪ್ರಸಂಗ ಕೌರವ ಪಾಂಡವರ ಯುದ್ಧ ವಿದ್ಯಾ ಪ್ರದರ್ಶನವಾದ ಬಳಿಕ ಬರುತ್ತದೆ; ಅದನ್ನು ಪಂಪ ವಿದ್ಯಾ ಪ್ರದರ್ಶನಕ್ಕೆ ಮೊದಲೆ ಅಳವಡಿಸಿದ್ದಾನೆ. ವನಪರ್ವದಲ್ಲಿ ಸೈಂಧವ ದುರ್ಯೋಧನರ ಪರಾಭವ ಪ್ರಸಂಗಗಳನ್ನು ಆರಂಭದಲ್ಲೆ ತಂದಿದ್ದಾನೆ.

**ಅಡಿ ಟಿಪ್ಪಣಿಗಳು**

1. "ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ" ಎಂದು ಪಂಪ ಹೇಳಿಕೊಳ್ಳುವುದರಿಂದ, ಅವನಿಗಿಂತ ಹಿಂದೆ ಕನ್ನಡದಲ್ಲಿ 'ಕವಿವ್ಯಾಸ' ಎಂಬವನೊಬ್ಬ ಭಾರತವನ್ನು ಬರೆದಿದ್ದನೆಂಬ ಅಭಿಪ್ರಾಯವೊಂದುಂಟು. ಇದಕ್ಕೆ ಆಧಾರಗಳು ಸಾಲವು.

2. ಮೂಲಮಹಾಭಾರತ 18 ಪರ್ವಗಳ ಕೃತಿಯಷ್ಟೆ. ಆದರೆ ಪಂಪ, ಕುಮಾರವ್ಯಾಸರಲ್ಲಿ 10 ಪರ್ವಗಳ ಕತೆಯಷ್ಟೆ ಕಂಡುಬರುತ್ತದೆ. ಇದಕ್ಕೇನು ಕಾರಣ? ಮೂಲದಲ್ಲಿದ್ದವು 10 ಪರ್ವಗಳು ಮಾತ್ರ, ಉಳಿದ ಪರ್ವಗಳು ಆಮೇಲೆ ಸೇರಿದುವು ಎಂಬುದೊಂದು ವಾದ. ಸಂಸ್ಕೃತ ಭಾರತದ ಆದಿಪರ್ವದ ಬಹುಭಾಗ ನಿಸ್ಸಂದೇಹವಾಗಿ ಈಚಿನದು. ಇನ್ನೊಂದು ಒಳ್ಳೆಯ ಉದಾಹರಣೆ : ಪಂಪನಲ್ಲಿ ದೂರ್ವಾಸಾತಿಥ್ಯ ಪ್ರಕರಣವಿಲ್ಲ. ವಾಸ್ತವವಾಗಿ ಇದು ವ್ಯಾಸಭಾರತದಲ್ಲಿ ಪ್ರಕ್ಷಿಪ್ತ; ಪಂಪನ ತರುವಾಯ ತೂರಿಕೊಂಡದ್ದು. ಅಷ್ಟೇ ಅಲ್ಲ. ಇದು ಪ್ರಾಯಃ ಕುಮಾರವ್ಯಾಸ ಭಾರತಕ್ಕಿಂತ ಈಚಿನದು. (ಪಂಪ, ಕುಮಾರವ್ಯಾಸರಿಗೆ ಆಕರವಾಗಿದ್ದ ಸಂಸ್ಕೃತ ಭಾರತದ ಪಾಠ ಹೆಚ್ಚು ಕಡಿಮೆ ಒಂದೇ ಆಗಿದ್ದಿರಬೇಕು.)

3. ಭಟ್ಟಾರಕ, ಆಸನಕಂಪ, ರೂಪಪರಾವರ್ತನ, ವೈಮಾನಿಕ ದೇವರು, ಅಷ್ಟಶೋಭೆ–ಇಂತಹ ಮಾತುಗಳಲ್ಲಷ್ಟೆ ಜೈನಧರ್ಮದ ವಾಸನೆಯನ್ನು ಶಂಕಿಸಬಹುದು. ಚಿತ್ರಾಂಗದ ದುರ್ಯೋಧನನ ಪೂರ್ವಭವದ ಹಗೆ ಎನ್ನುವಲ್ಲಿ, ಕುಂತಿ ಅರ್ಜುನನನ್ನು ಗರ್ಭದಲ್ಲಿ ಧರಿಸುವುದಕ್ಕೆ ಮುನ್ನ ಕಂಡ ಸ್ವಪ್ನಗಳ ವರ್ಣನೆಯಲ್ಲಿ, ದುರ್ಯೋಧನ ಒಂದು ಘಟ್ಟದಲ್ಲಿ ಸಂಸಾರದ ಅಸಾರತೆಯನ್ನರಿತನೆನ್ನುವಲ್ಲಿ ಕೂಡ ಆ ವಾಸನೆಯಿರಬಹುದು.

4. ವಾಸ್ತವವಾಗಿ, ವ್ಯಾಸಭಾರತದಲ್ಲೇ ಅರ್ಜುನನ ಪ್ರಾಶಸ್ತ್ಯದ ಸೂಚನೆಯಿದೆ.

5. ಈ ಅರ್ಥದಲ್ಲೂ 'ಸಮಸ್ತ' ಎಂಬ ಮಾತು ಪ್ರಯುಕ್ತವಾಗಿದೆಯೆಂಬ ಅಭಿಪ್ರಾಯ ವುಂಟು. ("ಸಮಾಸ" ಎಂದರೆ ಕೂಡಿಸುವುದು ಎಂದೂ ಆಗುತ್ತದೆ).

6. ಜೈನಭಾರತದಲ್ಲೂ ದ್ರೌಪದಿ ಅರ್ಜುನನೊಬ್ಬನಿಗೆ ಮಾತ್ರ ಪತ್ನಿ. ತನ್ನ ಕಾಲದ ಲೌಕಿಕ ನಡವಳಿಕೆಗೆ ಹೊಂದುವಂತೆ ಪಂಪ ಈ ಬದಲಾವಣೆಯನ್ನು ಮಾಡಿರಲೂಬಹುದು.

7. ದುರ್ಯೋಧನನ ಪಾತ್ರಕ್ಕೂ ಪಂಪ ಮೂಲದಲ್ಲಿಲ್ಲದ ಆಯಾಮವನ್ನೊದಗಿಸಿದ್ದಾನೆ.

8. ಬೆಳ್ಳಾವೆ ವೆಂಕಟನಾರಾಯಣಪ್ಪ (ಸಂ), ಪಂಪಭಾರತದ ಉಪೋದ್ಘಾತ, ಪು. XIVII

.9. ಅರ್ಜುನನ ಶೌರ್ಯ ಸಾಹಸಗಳ ಪ್ರಸಕ್ತಿ ಬಂದ ಕಡೆ ಹೀಗಾಗುತ್ತದೆ; ಅರ್ಜುನನನ್ನು ಮೇಲೆತ್ತುವ ಯಾವ ಅವಕಾಶವನ್ನೂ ಪಂಪ ಕಳೆದುಕೊಳ್ಳುವುದಿಲ್ಲ. ಅರ್ಜುನ ಜನನ ವೃತ್ತಾಂತ, ಅರ್ಜುನ–ಸುಭದ್ರೆಯರ ಪ್ರಣಯ ವಿರಹಗಳ ಚಿತ್ರಣ ಮೂಲಕ್ಕಿಂತ ವಿಸ್ತೃತವಾಗಿ ಬಂದಿವೆ. ಖಾಂಡವ ವನದಹನದ ಪ್ರಸಂಗವೂ ಅಷ್ಟೆ.

**ಪರಾಮರ್ಶನ ಗ್ರಂಥಗಳು**


1. ಬೆಳ್ಳಾವೆ ವೆಂಕಟನಾರಾಯಣಪ್ಪ (ಸಂ), ಪಂಪಭಾರತ
2. ರಂ.ಶ್ರೀ. ಮುಗಳಿ– ಕನ್ನಡ ಸಾಹಿತ್ಯ ಚರಿತ್ರೆ
3. ಜಿ.ಎಸ್. ಶಿವರುದ್ರಪ್ಪ (ಪ್ರ.ಸಂ.) – ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ 2), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.